# ಮುಸ್ಲಿಂ ಮಹಿಳೆಯರ (ವಿವಾಹ ವಿಚ್ಛೇದನೋತ್ತರ ಹಕ್ಕುಗಳ ರಕ್ಷಣೆ) ಅಧಿನಿಯಮ, 1986

(1986ರ ಅಧಿನಿಯಮ ಸಂಖ್ಯೆ 25)

**[15ನೇ ಮಾರ್ಚ್ 1999ರ ಭಾರತ ರಾಜಪತ್ರದ IXನೇ ಭಾಗದ 1ನೇ ವಿಭಾಗದ 17ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 7ರಿಂದ 9ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು :**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು
3. ವಿವಾಹ ವಿಚ್ಛೇದನದ ಸಮಯದಲ್ಲಿ ಮುಸ್ಲಿಂ ಮಹಿಳೆಗೆ ಕೊಡಬೇಕಾದ ಮೆಹರ್ ಅಥವಾ ಅವಳ ಇತರ ಸ್ವತ್ತುಗಳು
4. ಜೀವನಾಂಶ ಸಂದಾಯಕ್ಕಾಗಿ ಆದೇಶ
5. 1974ರ ಅಧಿನಿಯಮ 2ರ 125 ರಿಂದ 128ರ ವರೆಗಿನ ಪ್ರಕರಣಗಳ ಉಪಬಂಧಗಳ ನಿಯಂತ್ರಣಕ್ಕೆ ಒಳಪಡಲು ಆಯ್ಕೆಯ ಅವಕಾಶ
6. ನಿಯಮ ರಚನಾಧಿಕಾರ
7. ಮಧ್ಯಕಾಲೀನ ಉಪಬಂಧಗಳು.

# ಮುಸ್ಲಿಂ ಮಹಿಳೆಯರ (ವಿವಾಹ ವಿಚ್ಛೇದನೋತ್ತರ ಹಕ್ಕುಗಳ ರಕ್ಷಣೆ) ಅಧಿನಿಯಮ, 1986

## (1986ರ ಅಧಿನಿಯಮ ಸಂಖ್ಯೆ 25)

ತಮ್ಮ ಪತಿಗಳಿಂದ ವಿವಾಹವಿಚ್ಛೇದಿತರಾದ ಅಥವಾ ವಿವಾಹ ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆಯರ ಹಕ್ಕುಗಳನ್ನು ರಕ್ಷಿಸುವ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕವಾದ ವಿಷಯಗಳನ್ನು ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತ ವಾಗತಕ್ಕುದು :-

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ** .- (1) ಈ ಅಧಿನಿಯಮವನ್ನು ಮುಸ್ಲಿಂ ಮಹಿಳೆಯರ (ವಿವಾಹ ವಿಚ್ಛೇದನೋತ್ತರ ಹಕ್ಕುಗಳ ರಕ್ಷಣೆ) ಅಧಿನಿಯಮ, 1986 ಎಂದು ಕರೆಯತಕ್ಕುದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪಿಸುತ್ತದೆ.

**2. ಪರಿಭಾಷೆಗಳು** .- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ವಿವಾಹ ವಿಚ್ಛೇದಿತ ಮಹಿಳೆ" ಎಂದರೆ, ಮುಸ್ಲಿಂ ಕಾನೂನಿನ ಅನುಸಾರವಾಗಿ ಮದುವೆಯಾಗಿದ್ದು, ಮುಸ್ಲಿಂ ಕಾನೂನಿನ ಅನುಸಾರವಾಗಿ ತನ್ನ ಪತಿಯಿಂದ ವಿವಾಹ ವಿಚ್ಛೇದಿತಳಾದ ಅಥವಾ ವಿವಾಹ ವಿಚ್ಛೇದನವನ್ನು ಪಡೆದ ಒಬ್ಬ ಮುಸ್ಲಿಂ ಮಹಿಳೆ;

(ಬಿ) "ಇದ್ದತ್ ಅವಧಿ" ಎಂದರೆ, ಒಬ್ಬ ವಿವಾಹ ವಿಚ್ಛೇದಿತ ಮಹಿಳೆಯ ಸಂದರ್ಭದಲ್ಲಿ,-

(i) ಅವಳು ಮುಟ್ಟಾಗುತ್ತಿದ್ದರೆ, ವಿವಾಹ ವಿಚ್ಛೇದನದ ದಿನಾಂಕದ ಅನಂತರ ಮೂರು ಮುಟ್ಟಿನ ಅವಧಿಗಳು;

(ii) ಅವಳು ಮುಟ್ಟಾಗುತ್ತಿರದಿದ್ದರೆ, ಅವಳ ವಿವಾಹ ವಿಚ್ಛೇದನದ ನಂತರ ಮೂರು ಚಾಂದ್ರಮಾನ ಮಾಸಗಳು; ಮತ್ತು

(iii) ಅವಳು ತನ್ನ ವಿವಾಹ ವಿಚ್ಛೇದನದ ಸಮಯದಲ್ಲಿ ಗರ್ಭಿಣಿಯಾಗಿದ್ದರೆ, ವಿವಾಹ ವಿಚ್ಛೇದನ ಮತ್ತು ಅವಳ ಮಗುವಿನ ಜನನ ಅಥವಾ ಗರ್ಭಿಣಿ ಅವಧಿಯ ಮುಕ್ತಾಯ - ಇವುಗಳಲ್ಲಿ ಯಾವುದು ಮುಂಚಿತವೋ ಆ ಎರಡರ ನಡುವಿನ ಅವದಿ;

(ಸಿ) "ಮ್ಯಾಜಿಸ್ಟ್ರೇಟ್" ಎಂದರೆ, ವಿವಾಹ ವಿಚ್ಛೇದಿತ ಮಹಿಳೆ ವಾಸವಾಗಿರುವ ಪ್ರದೇಶದಲ್ಲಿ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿರುವ ಒಬ್ಬ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್;

(ಡಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

**3. ವಿವಾಹ ವಿಚ್ಛೇದನದ ಸಮಯದಲ್ಲಿ ಮುಸ್ಲಿಂ ಮಹಿಳೆಗೆ ಕೊಡಬೇಕಾದ ಮೆಹರ್ ಅಥವಾ ಅವಳ ಇತರ ಸ್ವತ್ತುಗಳು** .- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಒಬ್ಬ ವಿವಾಹ ವಿಚ್ಛೇದಿತ ಮಹಿಳೆಯು-

(ಎ) ಅವಳ ಹಿಂದಿನ ಪತಿಯು ಇದ್ದತ್ ಅವಧಿಯೊಳಗೆ ಅವಳಿಗೆ ಮಾಡಿಕೊಡಬೇಕಾದ ಯುಕ್ತ ಏರ್ಪಾಟನ್ನು ಮತ್ತು ಸಂದಾಯ ಮಾಡಬೇಕಾದ ಮತ್ತು ನ್ಯಾಯಸಮ್ಮತವಾದ ಜೀವನಾಂಶವನ್ನು ಪಡೆಯಲು;

(ಬಿ) ಅವಳ ವಿವಾಹ ವಿಚ್ಛೇದನಕ್ಕೆ ಮುಂಚೆ ಅಥವಾ ಅನಂತರ ತನ್ನಲ್ಲಿ ಜನಿಸಿದ ಮಕ್ಕಳನ್ನು ತಾನೇ ಪೋಷಿಸುತ್ತಿದ್ದ ಸಂದರ್ಭದಲ್ಲಿ, ತನ್ನ ಹಿಂದಿನ ಪತಿಯಿಂದ ಅಂಥ ಮಕ್ಕಳ ಅನುಕ್ರಮ ಜನನ ದಿನಾಂಕಗಳಿಂದ ಎರಡು ವರ್ಷಗಳ ಅವಧಿಯವರೆಗೆ ಒಂದು ಯುಕ್ತ ಏರ್ಪಾಟನ್ನು ಮತ್ತು ನ್ಯಾಯಸಮ್ಮತವಾದ ಜೀವನಾಂಶವನ್ನು ಪಡೆಯಲು ;

(ಸಿ) ಅವಳ ವಿವಾಹ ಸಮಯದಲ್ಲಿ ಅಥವಾ ಅನಂತರ ಮುಸ್ಲಿಂ ಕಾನೂನಿನ ಅನುಸಾರವಾಗಿ ಯಾವುದೇ ಸಮಯದಲ್ಲಿ ಅವಳಿಗೆ ಸಂದಾಯ ಮಾಡುವುದಾಗಿ ಒಪ್ಪಿಕೊಂಡ ಮೆಹರ್ ಅಥವಾ ಬಳುವಳಿಯ ಮೊತ್ತಕ್ಕೆ ಸಮನಾದ ಮೊಬಲಗನ್ನು ಪಡೆಯಲು; ಮತ್ತು

(ಡಿ) ವಿವಾಹಕ್ಕೆ ಮುಂಚೆ ಅಥವಾ ವಿವಾಹದ ಸಮಯದಲ್ಲಿ ಅಥವಾ ವಿವಾಹದ ಅನಂತರ ಅವಳ ಸಂಬಂಧಿಕರು ಅಥವಾ ಸ್ನೇಹಿತ/ಸ್ನೇಹಿತೆಯರು ಅಥವಾ ಪತಿ ಅಥವಾ ಪತಿಯ ಯಾರೇ ಸಂಬಂಧಿಕರು ಅಥವಾ ಅವನ ಸ್ನೇಹಿತ/ಸ್ನೇಹಿತೆಯರು ಅವಳಿಗೆ ಕೊಟ್ಟಂಥ ಎಲ್ಲಾ ಸ್ವತ್ತುಗಳನ್ನು ಪಡೆಯಲು

–ಹಕ್ಕುಳ್ಳವಳಾಗತಕ್ಕುದು.

(2) ಒಬ್ಬ ವಿವಾಹ ವಿಚ್ಛೇದಿತ ಮಹಿಳೆಗೆ ಅವಳ ವಿವಾಹ ವಿಚ್ಛೇದನದ ಅನಂತರ ಒಂದು ಯುಕ್ತ ಮತ್ತು ನ್ಯಾಯಸಮ್ಮತವಾದ ಏರ್ಪಾಟನ್ನು ಮತ್ತು ಜೀವನಾಂಶವನ್ನು ಅಥವಾ ಕೊಡತಕ್ಕ ಮೆಹರ್ ಅಥವಾ ಬಳುವಳಿಯ ಮೊಬಲಗನ್ನು ಸಂದಾಯ ಮಾಡಿರದಿದ್ದರೆ ಅಥವಾ (1)ನೇ ಉಪ–ಪ್ರಕರಣದ (ಡಿ) ಖಂಡದಲ್ಲಿ ಉಲ್ಲೇಖಿಸಲಾದ ಸ್ವತ್ತುಗಳನ್ನು ಒಪ್ಪಿಸಿಕೊಟ್ಟಿರದಿದ್ದರೆ, ಅವಳು ಅಥವಾ ಅವಳಿಂದ ಕ್ರಮಬದ್ಧವಾಗಿ ಅಧಿಕೃತನಾದ ಯಾವನೇ ವ್ಯಕ್ತಿಯು, ಅವಳ ಪರವಾಗಿ ಒಬ್ಬ ಮ್ಯಾಜಿಸ್ಟ್ರೇಟನಿಗೆ ಅಂಥ ಏರ್ಪಾಟು ಮತ್ತು ಜೀವನಾಂಶವನ್ನು ಅಥವಾ ಸಂದರ್ಭಾನುಸಾರ ಮೆಹರ್ ಅಥವಾ ಬಳುವಳಿಯನ್ನು ಸಂದಾಯ ಮಾಡುವಂತೆ ಅಥವಾ ಸ್ವತ್ತುಗಳನ್ನು ಒಪ್ಪಿಸಿಕೊಡುವಂತೆ ಆದೇಶಿಸಬೇಕೆಂದು ಕೋರಿ ಒಂದು ಅರ್ಜಿ ಸಲ್ಲಿಸಬಹುದು.

(3) (2)ನೇ ಉಪ–ಪ್ರಕರಣದ ಮೇರೆಗೆ ಒಬ್ಬ ವಿವಾಹ ವಿಚ್ಛೇದಿತ ಮಹಿಳೆಯು ಅರ್ಜಿಯನ್ನು ಸಲ್ಲಿಸಿದ ಸಂದರ್ಭದಲ್ಲಿ, ಮ್ಯಾಜಿಸ್ಟ್ರೇಟನಿಗೆ,–

(ಎ) ಅವಳ ಪತಿಯು ಸಾಕಷ್ಟು ಸಾಧನ ಮೂಲವನ್ನು ಹೊಂದಿದ್ದು, ಇದ್ದತ್ ಅವಧಿಯೊಳಗೆ ಅವಳಿಗೆ ಮತ್ತು ಮಕ್ಕಳಿಗೆ ಯುಕ್ತ ಮತ್ತು ನ್ಯಾಯಸಮ್ಮತವಾದ ಏರ್ಪಾಟನ್ನು ಮಾಡಲು ಅಥವಾ ಜೀವನಾಂಶವನ್ನು ಅವಳಿಗೆ ಸಂದಾಯ ಮಾಡಲು ತಪ್ಪಿದ್ದಾನೆಂದು ಅಥವಾ ನಿರ್ಲಕ್ಷ್ಯ ಮಾಡಿದ್ದಾನೆಂದು; ಅಥವಾ

(ಬಿ) ಅವಳಿಗೆ ಮೆಹರ್ ಅಥವಾ ಬಳುವಳಿಯ ಮೊತ್ತಕ್ಕೆ ಸಮನಾದ ಮೊಬಲಗನ್ನು ಸಂದಾಯ ಮಾಡಿಲ್ಲವೆಂದು ಅಥವಾ (1)ನೇ ಉಪ–ಪ್ರಕರಣದ (ಡಿ) ಖಂಡದಲ್ಲಿ ಉಲ್ಲೇಖಿಸಲಾದ ಸ್ವತ್ತುಗಳನ್ನು ಒಪ್ಪಿಸಿಕೊಟ್ಟಿಲ್ಲವೆಂದು

– ಮನದಟ್ಟಾದರೆ, ಅರ್ಜಿಯನ್ನು ಸಲ್ಲಿಸಲಾದ ದಿನಾಂಕದಿಂದ ಒಂದು ತಿಂಗಳೊಳಗಾಗಿ, ವಿವಾಹ ವಿಚ್ಛೇದಿತ ಮಹಿಳೆಯ ಅಗತ್ಯತೆಗಳು, ಅವಳು ವಿವಾಹದ ಅವಧಿಯಲ್ಲಿ ಅವಳು ನಡೆಸಿದ ಜೀವನಮಟ್ಟ ಮತ್ತು ಅವಳ ಮುಂಚಿನ ಪತಿಯ ಸಾಧನ ಮೂಲಗಳಿಗೆ ಗಮನ ಕೊಟ್ಟು ವಿವಾಹ ವಿಚ್ಛೇದಿತ ಮಹಿಳೆಗೆ ತಾನು ಸೂಕ್ತವೆಂದು ನಿರ್ಧರಿಸುವಂಥ ಯುಕ್ತ ಹಾಗೂ ನ್ಯಾಯಸಮ್ಮತವಾದ ಏರ್ಪಾಟನ್ನು ಮತ್ತು ಜೀವನಾಂಶವನ್ನು ಸಂದಾಯ ಮಾಡಬೇಕೆಂದು ಅಥವಾ ಸಂದರ್ಭಾನುಸಾರ ಅಂಥ ಮೆಹರ್ ಅಥವಾ ಬಳುವಳಿಯನ್ನು ಸಂದಾಯ ಮಾಡಬೇಕೆಂದು ಅಥವಾ (1)ನೇ ಉಪ–ಪ್ರಕರಣದ (ಡಿ) ಖಂಡದಲ್ಲಿ ಉಲ್ಲೇಖಿಸಲಾದಂಥ ಸ್ವತ್ತುಗಳನ್ನು ಒಪ್ಪಿಸಿಕೊಡಬೇಕೆಂದು ಅವಳ ಮುಂಚಿನ ಪತಿಗೆ ನಿರ್ದೇಶನ ನೀಡಿ ಒಂದು ಆದೇಶವನ್ನು ಮಾಡಬಹುದು:

ಪರಂತು, ಮ್ಯಾಜಿಸ್ಟ್ರೇಟನಿಗೆ ಸದರಿ ಅವಧಿಯೊಳಗೆ ಅರ್ಜಿಯನ್ನು ವಿಲೆ ಮಾಡುವುದು ಅಸಾಧ್ಯವೆನ್ನಿಸಿದರೆ, ಅವನು ಆ ಬಗ್ಗೆ ಕಾರಣಗಳನ್ನು ದಾಖಲುಮಾಡಿ ಸದರಿ ಅವಧಿ ಮುಗಿದ ನಂತರ ಅರ್ಜಿಯನ್ನು ವಿಲೆ ಮಾಡಬಹುದು.

(4) (3)ನೇ ಉಪ-ಪ್ರಕರಣದ ಮೇರೆಗಿನ ಆದೇಶವನ್ನು ಯಾವ ವ್ಯಕ್ತಿಯ ವಿರುದ್ಧವಾಗಿ ಮಾಡಲಾಗಿದೆಯೋ ಆ ಯಾವನೇ ವ್ಯಕ್ತಿಯು, ಸಾಕಷ್ಟು ಕಾರಣವಿಲ್ಲದೆ ಆದೇಶವನ್ನು ಪಾಲಿಸಲು ತಪ್ಪಿದರೆ, ಮ್ಯಾಜಿಸ್ಟ್ರೇಟನು ದಂಡಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ ದಂಡ ವಿಧಿಸಲು ಉಪಬಂಧಿಸಲಾದ ರೀತಿಯಲ್ಲಿ ಸಂದಾಯ ಮಾಡಬೇಕಾದ ಜೀವನಾಂಶ ಅಥವಾ ಮೆಹರ್ ಅಥವಾ ಬಳುವಳಿಯ ಮೊಬಲಗನ್ನು ವಿಧಿಸುವುದಕ್ಕಾಗಿ ಒಂದು ವಾರೆಂಟನ್ನು ಹೊರಡಿಸಬಹುದು ಮತ್ತು ಅಂಥ ವ್ಯಕ್ತಿಗೆ ವಾರೆಂಟು ಜಾರಿಯಾದ ನಂತರ ಸಂದಾಯವಾಗದೆ ಉಳಿದ ಇಡೀ ಮೊತ್ತಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಅಂಥ ವ್ಯಕ್ತಿಯನ್ನು ಪ್ರತಿವಾದಿಯಾಗಿ ಸುನಾವಣೆ ಮಾಡುವುದಕ್ಕೆ ಮತ್ತು ಸದರಿ ಸಂಹಿತೆಯ ಉಪಬಂಧಗಳ ಅನುಸಾರವಾಗಿ ಶಿಕ್ಷೆಯನ್ನು ವಿಧಿಸುವುದಕ್ಕೆ ಒಳಪಟ್ಟು, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯವರೆಗೆ ಅಥವಾ ಅವನು ಅದರೊಳಗಾಗಿ ಸಂದಾಯ ಮಾಡಿದರೆ, ಸಂದಾಯ ಮಾಡುವವರೆಗೆ ಕಾರಾವಾಸ ಶಿಕ್ಷೆಯನ್ನು ವಿಧಿಸಬಹುದು.

**4. ಜೀವನಾಂಶ ಸಂದಾಯಕ್ಕಾಗಿ ಆದೇಶ** .- (1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಒಬ್ಬ ವಿವಾಹ ವಿಚ್ಛೇದಿತ ಮಹಿಳೆಯು ಇದ್ದತ್ ಅವಧಿಯ ನಂತರ ಪುನಃ ವಿವಾಹವಾಗಿಲ್ಲವೆಂದು ಮತ್ತು ತನ್ನನ್ನು ಪೋಷಿಸಿಕೊಳ್ಳಲು ಅಸಮರ್ಥಳಾಗಿರುವಳೆಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅವನು ವಿವಾಹ ವಿಚ್ಛೇದಿತ ಮಹಿಳೆಯ ಅಗತ್ಯತೆಗಳು, ವಿವಾಹದ ಅವಧಿಯಲ್ಲಿ ಅವಳು ನಡೆಸಿದ ಜೀವನ ಮಟ್ಟವನ್ನು ಮತ್ತು ಮುಸ್ಲಿಂ ಕಾನೂನಿನ ಅನುಸಾರವಾಗಿ ಅವಳ ಮರಣಾನಂತರ ಅವಳ ಸ್ವತ್ತನ್ನು ಪಡೆಯಲು ಹಕ್ಕುಳ್ಳವರಾಗುವಂಥ ಅವಳ ಸಂಬಂಧಿಕರ ಸಾಧನ ಮೂಲಗಳನ್ನು ಗಮದಲ್ಲಿಟ್ಟುಕೊಂಡು, ತಾನು ಸೂಕ್ತವೆಂದು ನಿರ್ಧರಿಸಬಹುದಾದಂಥ ಯುಕ್ತ ಹಾಗೂ ನ್ಯಾಯಸಮ್ಮತ ಜೀವನಾಂಶವನ್ನು, ಅಂಥ ಸಂಬಂಧಿಕರು ಅವಳ ಸ್ವತ್ತನ್ನು ಅವರು ಪಡೆಯಬಹುದಾದಂಥ ಅನುಪಾತದಲ್ಲಿ ಮತ್ತು ಅವನು ತನ್ನ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಳಲ್ಲಿ ಸಂದಾಯ ಮಾಡಬೇಕೆಂದು ನಿರ್ದೇಶಿಸಿ ಆದೇಶವನ್ನು ಮಾಡತಕ್ಕುದು :

ಪರಂತು, ಅಂಥ ವಿವಾಹ ವಿಚ್ಛೇದಿತ ಮಹಿಳೆಗೆ ಮಕ್ಕಳಿದ್ದರೆ, ಮ್ಯಾಜಿಸ್ಟ್ರೇಟನು ಅಂಥ ಮಕ್ಕಳು ಮಾತ್ರ ಅವಳಿಗೆ ಜೀವನಾಂಶವನ್ನು ಸಂದಾಯ ಮಾಡಬೇಕೆಂದು ಆದೇಶಿಸತಕ್ಕುದು ಮತ್ತು ಅಂಥ ಮಕ್ಕಳು ಅಂಥ ಜೀವನಾಂಶವನ್ನು ಸಂದಾಯ ಮಾಡಲು ಅಸಮರ್ಥರಾಗಿರುವ ಸಂದರ್ಭದಲ್ಲಿ, ಮ್ಯಾಜಿಸ್ಟ್ರೇಟನು ಅಂಥ ವಿವಾಹ ವಿಚ್ಛೇದಿತ ಮಹಿಳೆಯ ತಂದೆ-ತಾಯಿಗಳು ಅವಳಿಗೆ ಜೀವನಾಂಶವನ್ನು ಸಂದಾಯ ಮಾಡಬೇಕೆಂದು ಆದೇಶ ನೀಡತಕ್ಕುದು:

ಮತ್ತೂ ಪರಂತು, ತಂದೆ ತಾಯಿಗಳಿಬ್ಬರಲ್ಲಿ ಯಾರೇ ಒಬ್ಬರು ಮ್ಯಾಜಿಸ್ಟ್ರೇಟ್‌ನಿಂದ ಆದೇಶಿಸಲಾದ ಜೀವನಾಂಶದ ತನ್ನ ಪಾಲನ್ನು ಸಂದಾಯ ಮಾಡಲು ತನಗೆ ಸಾಧನ ಮೂಲವಿಲ್ಲವೆಂಬ ಕಾರಣದಿಂದ ಅಸಮರ್ಥನಾದರೆ, ಮ್ಯಾಜಿಸ್ಟ್ರೇಟನು, ಅಂಥ ಅಸಮರ್ಥತೆಯ ರುಜುವಾತನ್ನು ತನಗೆ ಒದಗಿಸಿದ ಮೇಲೆ, ತಾನು ಆದೇಶಿಸಿದ ಜೀವನಾಂಶದಲ್ಲಿನ ಅಂಥ ಸಂಬಂಧಿಕರ ಪಾಲನ್ನು ಸಂದಾಯ ಮಾಡಲು ಸಾಧನ ಮೂಲವನ್ನು ಹೊಂದಿದ್ದಾರೆ ಎಂದು ಆ ಮ್ಯಾಜಿಸ್ಟ್ರೇಟನಿಗೆ ತೋರುವಂಥ ಇತರ ಸಂಬಂಧಿಕರು ತಾನು ಆದೇಶಿಸಲು ಸೂಕ್ತವೆಂದು ಭಾವಿಸುವಂಥ ಅನುಪಾತದಲ್ಲಿ ಸಂದಾಯ ಮಾಡಬೇಕೆಂದು ಅವನು ಅದೇಶಿಸಬಹುದು.

(2) ಒಬ್ಬ ವಿವಾಹ ವಿಚ್ಛೇದಿತ ಮಹಿಳೆಯು ತನ್ನನ್ನು ಪೋಷಿಸಿಕೊಳ್ಳಲು ಅಸಮರ್ಥಳಾಗಿದ್ದು ಅವಳಿಗೆ (1)ನೇ ಉಪ-ಪ್ರಕರಣದಲ್ಲಿ ನಮೂದಿಸಲಾಗಿರುವ ಯಾರೇ ಸಂಬಂಧಿಕರು ಇಲ್ಲದಿದ್ದರೆ ಅಥವಾ ಅವರಲ್ಲಿ ಯಾರೊಬ್ಬರು ಮ್ಯಾಜಿಸ್ಟ್ರೇಟನಿಂದ ಆದೇಶಿಸಲಾದ ಜೀವನಾಂಶವನ್ನು ಸಂದಾಯ ಮಾಡಲು

ಅಸಮರ್ಥರಾಗಿದ್ದರೆ ಅಥವಾ ಇತರ ಸಂಬಂಧಿಕರು (1)ನೇ ಉಪ-ಪ್ರಕರಣದ ಎರಡನೇ ಪರಂತುಕದ ಮೇರೆಗೆ ಇತರ ಸಂಬಂಧಿಕರು ಸಂದಾಯ ಮಾಡಬೇಕೆಂದು ಮ್ಯಾಜಿಸ್ಟ್ರೇಟನಿಂದ ಆದೇಶಿಸಲಾದವರ ಪಾಲುಗಳನ್ನು ಸಂದಾಯ ಮಾಡಲು ಸಾಧನ ಮೂಲವನ್ನು ಹೊಂದಿಲ್ಲದಿದ್ದರೆ, ಮ್ಯಾಜಿಸ್ಟ್ರೇಟನು ಆದೇಶದ ಮೂಲಕ, ಆ ಮಹಿಳೆಯು ವಾಸವಾಗಿರುವ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ವಕ್ಫ್ ಅಧಿನಿಯಮ, 1954 (1954ರ 29)ರ 9ನೇ ಪ್ರಕರಣದ ಮೇರೆಗೆ ಅಥವಾ ಒಂದು ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಸ್ಥಾಪಿತವಾದ ರಾಜ್ಯ ವಕ್ಫ್ ಮಂಡಲಿಯು, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಳಲ್ಲಿ (1)ನೇ ಉಪ-ಪ್ರಕರಣದ ಮೇರೆಗೆ ತಾನು ನಿರ್ಧರಿಸಿದಂಥ ಜೀವನಾಂಶವನ್ನು ಸಂದಾಯ ಮಾಡಬೇಕೆಂದು ಅಥವಾ ಸಂದರ್ಭಾನುಸಾರ, ಸಂಬಂಧಿಕರು ಸಂದಾಯ ಮಾಡಲು ಅಸಮರ್ಥರಾದಂಥ ಅವರ ಪಾಲುಗಳನ್ನು ಸಂದಾಯ ಮಾಡಬೇಕೆಂದು ನಿರ್ದೇಶಿಸಬಹುದು.

**5. 1974ರ ಅಧಿನಿಯಮ 2ರ 125 ರಿಂದ 128ರ ವರೆಗಿನ ಪ್ರಕರಣಗಳ ಉಪಬಂಧಗಳ ನಿಯಂತ್ರಣಕ್ಕೆ ಒಳಪಡಲು ಆಯ್ಕೆಯ ಅವಕಾಶ.**- 3ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಅರ್ಜಿಯನ್ನು ಮೊದಲ ಸಲ ಸುನಾವಣೆ ಮಾಡಿದ ದಿನಾಂಕದಂದು, ಆ ವಿವಾಹ ವಿಚ್ಛೇದಿತ ಮಹಿಳೆ ಮತ್ತು ಅವಳ ಹಿಂದಿನ ಪತಿಯು ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ, ಶಪಥಪತ್ರದ ಮೂಲಕ ಅಥವಾ ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ ಇತರ ಯಾವುದೇ ಲಿಖಿತ ಘೋಷಣೆಯ ಮೂಲಕ ತಾವು ದಂಡಪ್ರಕ್ರಿಯಾ ಸಂಹಿತೆ, 1973 (1974ರ 2)ರ 125 ರಿಂದ 128ನೇ ಪ್ರಕರಣಗಳ ಉಪಬಂಧಗಳ ನಿಯಂತ್ರಣಕ್ಕೆ ಒಳಪಡಲು ಆಯ್ಕೆಯ ಆದ್ಯತೆ ನೀಡಿದ್ದು, ಅರ್ಜಿಯನ್ನು ಸುನಾವಣೆ ಮಾಡುವ ನ್ಯಾಯಾಲಯದಲ್ಲಿ ಅಂಥ ಶಪಥಪತ್ರವನ್ನು ಅಥವಾ ಘೋಷಣೆಯನ್ನು ಸಲ್ಲಿಸಿದ್ದರೆ, ಮ್ಯಾಜಿಸ್ಟ್ರೇಟನು ಅಂಥ ಅರ್ಜಿಯನ್ನು ಅದರ ಅನುಸಾರವಾಗಿ ವಿಲೆ ಮಾಡತಕ್ಕುದು.

**ವಿವರಣೆ:**- ಈ ಪ್ರಕರಣದ ಉದ್ದೇಶಗಳಿಗಾಗಿ, "ಅರ್ಜಿಯ ಮೊದಲ ಸಲದ ಸುನಾವಣೆಯ ದಿನಾಂಕ" ಎಂದರೆ ಅರ್ಜಿಯ ಪ್ರತಿವಾದಿಯ ಹಾಜರಾತಿಗಾಗಿ ಸಮನುಗಳಲ್ಲಿ ನಿಗದಿಪಡಿಸಿದ ದಿನಾಂಕ.

**6. ನಿಯಮ ರಚನಾಧಿಕಾರ.**- (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧಕವಿಲ್ಲದಂತೆ ಅಂಥ ನಿಯಮಗಳಲ್ಲಿ,-

(ಎ) 5ನೇ ಪ್ರಕರಣದ ಮೇರೆಗೆ ಸಲ್ಲಿಸಬೇಕಾದ ಶಪಥಪತ್ರ ಅಥವಾ ಇತರ ಲಿಖಿತ ಘೋಷಣೆಯ ನಮೂನೆ ;

(ಬಿ) ಅಂಥ ಅರ್ಜಿಗಳ ಪಕ್ಷಕಾರರಿಗೆ ನೋಟೀಸ್ ಜಾರಿ ಮಾಡುವುದು; ಅಂಥ ಅರ್ಜಿಗಳ ಸುನಾವಣಾ ದಿನಾಂಕಗಳು ಮತ್ತು ಇತರ ವಿಷಯಗಳೂ ಸೇರಿದಂತೆ ಈ ಅಧಿನಿಯಮದ ಮೇರೆಗೆ ಅರ್ಜಿಗಳನ್ನು ವಿಲೆ ಮಾಡುವಲ್ಲಿ ಮ್ಯಾಜಿಸ್ಟ್ರೇಟನು ಅನುಸರಿಸತಕ್ಕ ಪ್ರಕ್ರಿಯೆ;

(ಸಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ

-ಇವುಗಳನ್ನು ಉಪಬಂಧಿಸಬಹುದು.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕುದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ

ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ವಿಷಯದ ಕಾನೂನು ಮಾನ್ಯತೆಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

7. **ಮಧ್ಯಕಾಲೀನ ಉಪಬಂಧಗಳು.**- ಈ ಅಧಿನಿಯಮದ ಪ್ರಾರಂಭದಲ್ಲಿ ಒಬ್ಬ ಮ್ಯಾಜಿಸ್ಟ್ರೇಟನ ಮುಂದೆ ಇತ್ಯರ್ಥದಲ್ಲಿರುವ ದಂಡಪ್ರಕ್ರಿಯಾ ಸಂಹಿತೆ, 1973 (1974ರ2)ರ 125ನೇ ಪ್ರಕರಣದ ಮೇರೆಗಿನ ಅಥವಾ 127ನೇ ಪ್ರಕರಣದ ಮೇರೆಗೆ ಒಬ್ಬ ವಿವಾಹ ವಿಚ್ಛೇದಿತ ಮಹಿಳೆಯ ಪ್ರತಿಯೊಂದು ಅರ್ಜಿಯನ್ನು ಆ ಸಂಹಿತೆಯಲ್ಲಿ ಏನೇ ಇದ್ದರೂ ಮತ್ತು ಈ ಅಧಿನಿಯಮದ 5ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಅಂಥ ಮ್ಯಾಜಿಸ್ಟ್ರೇಟನು ವಿಲೆ ಮಾಡತಕ್ಕುದು.

* * *